PW-1

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**
**ಎಂ.ವಿ.ಸಿ. ನಂಃ 575/ 2022**

**ದಿನಾಂಕಃ30.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಕೆ ಎಸ್ ಕೆ ವಕೀಲರಿಂದಃ-**

ನಾನು ಅರಕಲಗೂಡು ತಾಲ್ಲೂಕಿನ ಹೊಳಲುಗೋಡು ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಬಿದ್ದ ಬೈಕ್ ಸಂಖ್ಯೆ ಕೆಎ-13-ಜೆ-2566 ಎಂದರೆ ಸರಿ. ಸದರಿ ಬೈಕ್ ನ್ನು ಚಲಾಯಿಸಲು ನನಗೆ ಪರವಾಗಿಗೆ ಇದೆ. ನನ್ನ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರ ಕೈಯಲ್ಲಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನನಗೆ ಮಧ್ಯಸೇವನೆ ಮಾಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಮೂಲ 1 ನೇ ಎದುರುದಾರರು ತೀರಿಕೊಂಡಿದ್ದಾರೆ. 1 ನೇ ಎದುರುದಾರರು ಅಂದರೆ ಮೃತ ದಯಾನಂದ ರವರು ಸೀಟ್ ಆಟೋ ಸಂಖ್ಯೆ ಕೆಎ-54-2427 ವಾಹನವನ್ನು ನಮ್ಮ ರೂಟಿನಲ್ಲಿ ಚಲಾಯಿಸುತ್ತಿದ್ದರು ಎಂದರೆ ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ದಿಃ 12.04.2021 ರಲ್ಲಿ 1 ನೇ ಎದುರುದಾರರು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 14.04.2021 ರಂದು ಅಪಘಾತವಾಗಿತ್ತು. ಅಪಘಾತದ ಮೊದಲು 1 ನೇ ಎದುರುದಾರರು ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರರು ತೀರಿಕೊಂಡ ಕಾರಣ ಅವರ ಆಟೋ ಅವರ ಮನೆಯ ಮುಂದೆ ನಿಂತಿತ್ತು ಎಂದರೆ ನನಗೆ ಗೊತ್ತಿಲ್ಲ. ಮೂಲ 1 ನೇ ಎದುರುದಾರರು ತೀರಿಕೊಂಡ ಕಾರಣ ಅವರ ತಾಯಿ ಮತ್ತು ಅವರ ಅಣ್ಣ ಮನ ನೊಂದು ಮನೆಯಲ್ಲಿಯೇ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಘಟನೆಯ ಸಮಯದಲ್ಲಿ ಮಸೀದಿಗೆ ಹೋಗಿದ್ದೆ. ನಾನು ಮುಸೀದಿಯಿಂದ ವಾಪಸ್ಸು ಬರುವಾಗ ನಾನೇ ವೇಗವಾಗಿ ನಿರ್ಲಕ್ಷತನದಿಂದ ಬೈಕ್

PW-1

ಓಡಿಸಿಕೊಂಡ ಬಂದ ಕಾರಣ ಬಿದ್ದು ಪೆಟ್ಟು ಮಾಡಿಕೊಂಡಿದ್ದು ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ನಮ್ಮ ರೂಟಿನಲ್ಲಿ ಹೋಗುತ್ತಿದ್ದ ಆಟೋ ವಾಹವನ್ನು ಸೇರಿಸಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲೆಂದು ಸುಳ್ಳು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಯಾವುದೇ ಚಿಕಿತ್ಸೆ ಪಡೆಯದೆ ಇದ್ದರೂ ಸಹ ಆ ಬಗ್ಗೆ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಕೂಲಿ ಮತ್ತು ವ್ಯವಸಾಯ ಮಾಡಿಕೊಂಡಿದ್ದೇನೆ. ನಾನು ವ್ಯವಸಾಯ ಮಾಡುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಮೊದಲಿನಂತೆ ಕೆಲಸ ಕಾರ್ಯಗಳನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರರು ಅರಕಲಗೂಡು ಬಸ್ ಡಿಪೋದಲ್ಲಿ ಡ್ರೈವರ್ ಕಮ್ ಕಂಡಕ್ಟರ್ ಕೆಲಸ ಮಾಡಿಕೊಂಡಿದ್ದು ಅವರು ಯಾವುದೇ ರೀತಿ ಆಟೋ ಚಾಲನೆ ಮಾಡದೆ ಇದ್ದರೂ ಸಹ ಅವರಿಂದ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ, ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮೃತ ದಯಾನಂದ ಮತ್ತು ಅವರ ಅಣ್ಣ ಮತ್ತು ತಾಯಿ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಒಂದನೇ ಎದುರುದಾರರಿಗೆ 90 ವರ್ಷವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಎದುರುದಾರರು ಈ ಪ್ರಕರಣಕ್ಕೆ ಸಂಬಂಧಂ ಇಲ್ಲದೆ ಇದ್ದರೂ ಸಹ ಅವರಿಂದ ಪರಿಹಾರದ ಹಣವನ್ನು ಪಡೆಯಲು ಅವರನ್ನು ಈ ಕೇಸಿನಲ್ಲಿ ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** ಒಂದನೇ ಎದುರುದಾರರ ಪರ ವಕೀಲರು 2ನೇ ಎದುರುದಾರರ ಪಾಟೀಸವಾಲನ್ನೆ ಅಳವಡಿಕೊಳ್ಳುತ್ತಾರೆ.

PW-1

**ಮರು ವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀರಣಗೊಳಿಸಿ ಮುದ್ರಿಸಲಾಯಿತು.)**

ಓ ಹೇ ಕೇ ಸ ಇದೆ

**(ರೂಪಾ ಆರ್. ಕುಲಕರ್ಣಿ)**
**3** ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಹಾಸನ.